2.	ಕರ್ನಾಟಕ ತೆರಿಗೆ ಕಾನೂನು (ತಿದ್ದುಪಡಿ) ವಿಧೇಯಕ, 1995	31.3.1995	ರಾಜ್ಯಪಾಲರು
3.	ಕರ್ನಾಟಕ ವಿದ್ಯುತ್ ಸರಬರಾಜು ಉದ್ಯಮಗಳ (ಆರ್ಜನೆ) (ತಿದ್ದುಪಡಿ) ವಿಧೇಯಕ, 1995	30.4.1995	ರಾಜ್ಯಪಾಲರು
4.	ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧಿಸುವ) ವಿಧೇಯಕ, 1995	"	ರಾಜ್ಯಪಾಲರು
5.	ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ, 1995	"	ರಾಜ್ಯಪಾಲರು
6.	ಕರ್ನಾಟಕ ಕಾನೂನು ನೆರವು ಮಂಡಲಿ (ತಿದ್ದುಪಡಿ) ವಿಧೇಯಕ, 1995	"	ರಾಜ್ಯಪಾಲರು
7.	ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ, 1995	"	ರಾಜ್ಯಪಾಲರು
8.	ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ವಿಧೇಯಕ, 1995	10.5.1995	ರಾಜ್ಯಪಾಲರು
9.	ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಲಿ (ತಿದ್ದುಪಡಿ ವಿಧೇಯಕ, 1995	31.05.1995	ರಾಜ್ಯಪಾಲರು

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ ನನ್ನದೊಂದು ವಿನಂತಿ ಇದೆ, ಇವತ್ತು ರಾತ್ರಿ 11 ಆಗಲೀ, 12 ಗಂಟೆಯಾಗಲೀ, 1 ಗಂಟೆಯಾಗಲೀ ದಯಮಾಡಿ ನಾನು ಏನು ಮಾತನಾಡಬೇಕೆಂದು ಇದ್ದೇನೆ. ಅದಕ್ಕೆ ನನಗೆ ಸುಮಾರು 8-10 ಗಂಟೆ ಸಮಯ ಬೇಕಾಗುತ್ತದೆ. ದಯಮಾಡಿ ಇವತ್ತು ರಾತ್ರಿ 1 ಗಂಟೆಯಾಗಲಿ ನಾವು ಕುಳಿತುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು : ಅದಕ್ಕೆ ನಾನು ತಮಗೆ ಏನು ಹೇಳುವುದೆಂದರೆ, ಈಗ ಇಲ್ಲಿಗೆ ಮುಗಿಸಿ ಊಟದ ನಂತರ ಬಂದು ಕುಳಿತುಕೊಂಡರೆ ನಾನ್‌ಸ್ಟಾಪ್ ಆಗಿ ನೀವು ಕಂಟಿನ್ಯೂ ಮಾಡಬಹುದು. ಮಧ್ಯೆ ಊಟಕ್ಕೆ ಬ್ರೇಕ್ ಮಾಡುವುದು ಬೇಡ ಎಂದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಬಹುದು.

ಶ್ರೀ ಎಸ್. ಬಂಗಾರಪ್ಪ : ನನಗೆ ಅರ್ಥವಾಗಲಿಲ್ಲ, ಮಾನ್ಯ ವಿರೋಧಪಕ್ಷದ ನಾಯಕರು ವಿಷಯಗಳನ್ನು ಸಂಗ್ರಹಿಸಿರಬಹುದು ಮಾತನಾಡಲಿ. 8-10 ಗಂಟೆ ಭಾಷಣ ಮಾಡುತ್ತೇವೆಂದರೆ ಏಕೆಂದರೆ ಅವಿಶ್ವಾಸ ನಿರ್ಣಯ ಅಂದರೆ ಅದು ಯಾರದೇ ಸ್ವತ್ತಾಗುವುದಿಲ್ಲ, ಅದು ಸದನದ ಸ್ವತ್ತಾಗುತ್ತದೆ. ನಾವು ಅದನ್ನು ಸ್ವಲ್ಪ ಗಮನದಲ್ಲಿಟ್ಟುಕೊಳ್ಳುವುದು ಬಹಳ ಒಳ್ಳೆಯದು.

ಶ್ರೀ ಕೆ.ಎನ್. ನಾಗೇಗೌಡ : ಅವಿಶ್ವಾಸ ನಿರ್ಣಯ ಅಂದರೆ ಶಾರ್ಟ್ ಗನ್ ಇದ್ದ ಹಾಗೆ, ಜಟಕಾ ಗಾಡಿಯ ತರಹ ಎಂಟು ಗಂಟೆ ಕಾಲದ ಅವಧಿಯವರೆಗೂ ಹೋಗುವುದಕ್ಕಲ್ಲ, ಅದಕ್ಕೆ ತಾವು ಸಮಯವನ್ನು ನಿಗಧಿಗೊಳಿಸಬೇಕು.

ಅಧ್ಯಕ್ಷರು: ನಾಗೇಗೌಡರೆ ನೀವು ಹಿರಿಯ ಸದಸ್ಯರಿದ್ದೀರಿ, ಪದಗಳನ್ನು ಸ್ವಲ್ಪ ಜಾಗ್ರತೆಯಿಂದ ಬಳಸಿದರೆ ನನಗೆ ಅನುಕೂಲವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರೇ ಅವಿಶ್ವಾಸ ನಿರ್ಣಯವನ್ನು ಮೂವ್ ಮಾಡಿ ಕೈಯೆತ್ತಿ ಬಿಟ್ಟರೆ ಐದು ನಿಮಿಷಕ್ಕೆ ಮುಗಿದುಹೋಗುತ್ತದೆ. ಚರ್ಚೆಯೇ ಬೇಡ.

ಶ್ರೀ ಎಸ್. ಬಂಗಾರಪ್ಪ : ರಾತ್ರಿ ಹತ್ತು ಹನ್ನೊಂದು ಗಂಟೆಯವರೆಗೆ ಮಾತನಾಡಲು ನೀವು ಒಪ್ಪಿಗೆ ಕೊಟ್ಟಿರಿ ಎಂದು ನಾನು ಭಾವಿಸಿಲ್ಲ,...

ಅಧ್ಯಕ್ಷರು : ದಯಮಾಡಿ ಅದನ್ನು ನನ್ನ ವಿವೇಚನೆಗೆ ಬಿಡಿ.

ಶ್ರೀ ಎಸ್. ಬಂಗಾರಪ್ಪ : ಅದನ್ನು ತಮಗೆ ಬಿಡುತ್ತೇವೆ, ಆದರೆ ಬೇರೆ ಪಕ್ಷಗಳ ಸದಸ್ಯರಿಗೂ ಹಕ್ಕಿದೆ ಎಂಬುದು ತಮ್ಮ ಗಮನದಲ್ಲಿ ಇರತಕ್ಕಂಥದ್ದು ನಮಗೆ ಬಹಳ ಸಂತೋಷವಾಗಿದೆ.

ಪ್ರಕಟಣೆ

ದಿನಾಂಕ 7ನೇ ಆಗಸ್ಟ್ 1995ರಂದು ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯು ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿತು.

8.8.1995	1. ಪ್ರಶ್ನೋತ್ತರ
ಮಂಗಳವಾರ	2. ಅವಿಶ್ವಾಸ ನಿರ್ಣಯದ ಮೇಲೆ ಮುಂದುವರಿದ ಚರ್ಚೆ
9.8.1995	ಬೆಳಗ್ಗೆ 10.00 ಗಂಟೆಗೆ ಸಭೆ ಸೇರುವುದು
ಬುಧವಾರ	1. ಪ್ರಶ್ನೋತ್ತರ
	2. ಗಮನ ಸೆಳೆಯುವ ಸೂಚನೆಗಳು
	3. ಅವಿಶ್ವಾಸ ನಿರ್ಣಯದ ಮೇಲೆ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ.

ಸದನವನ್ನು 9ನೇ ಆಗಸ್ಟ್ 1995ರಂದು ಮುಂದೂಡಿ, ಪುನಃ 21ನೇ ಆಗಸ್ಟ್ 1995ರಂದು ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರಿ, ಈ ಕೆಳಕಂಡ ಇಲಾಖೆಗಳಿಗೆ ಸಂಬಂಧಿಸಿದಂತೆ

ಅನುದಾನ ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.

21.8.1995	1. ಪ್ರಶ್ನೋತ್ತರ
ಸೋಮವಾರ	2. ಗಮನ ಸೆಳೆಯುವ ಸೂಚನೆಗಳು
ಮತ್ತು	3. ಶಿಕ್ಷಣ ಇಲಾಖೆ
22.8.1995	4. ವಾರ್ತಾ, ಪ್ರವಾಸೋದ್ಯಮ ಯುವಜನ
ಮಂಗಳವಾರ	ಸೇವೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ
23.8.1995	1. ಪ್ರಶ್ನೋತ್ತರ
ಬುಧವಾರ	2. ಗಮನ ಸೆಳೆಯುವ ಸೂಚನೆಗಳು
ಮತ್ತು	
24.8.1995	3. ಕಾರ್ಮಿಕ ಮತ್ತು ಸಮಾಜ ಕಲ್ಯಾಣ